ನಾನು ದಾವಾ ಸ್ವತ್ತಿನ ಖರ್ಚು  ಮತ್ತು ಆದಾಯದ ಬಗ್ಗೆ ಲೆಕ್ಕ ಇಟ್ಟಿದ್ದೇನೆ ಸದರಿ ಲೆಕ್ಕದ ಪ್ರತಿಯನ್ನು ಉಳಿದ ದಾಯಾದಿಗಳಿಗೆ ಕೊಟ್ಟಿದ್ದೇನೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ಆಗುವುದಿಲ್ಲ ಏಕೆಂದರೆ ವಾದಿ ಅವುಗಳನ್ನು ಸರಿಯಾಗಿ ಇಟ್ಟಿದ್ದಾರೆ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತುಗಳ ಉಸ್ತುವಾರಿ ಮಾಡುತ್ತೇನೆ. ನಾನು 2008 ರಿಂದ ದಾವಾ ಸ್ವತ್ತುಗಳನ್ನು ನೋಡುತ್ತಿದ್ದೇನೆ. ನಾನು ಪಿತ್ರಾರ್ಜಿತ ಸ್ವತ್ತುಗಳ ಸಂಬಂಧ ಇತರ ದಾಯಾದಿಗಳಿಗೆ ಲೆಕ್ಕ ಕೊಡದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರದ ಎಲ್ಲಾ ಕಛೇರಿಗಳು, ಪ್ರಾಧಿಕಾರ ಮತ್ತು ಕೋರ್ಟ್‌ನಲ್ಲಿ 1ನೇ ಪ್ರತಿವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.*

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

*ಪ್ರಧಾನ ಸಿವಿಲ್ ನ್ಯಾಯಾಧೀಶರು.*

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ: 26-04-2018.

<u>ಪಾಟೀ ಸವಾಲು :-</u> 2 ನೇ ಪ್ರತಿವಾದಿಯಿಂದ

ಈ ದಾವೆಯ 1 ನೇ ಪ್ರತಿವಾದಿ ಜಯಶ್ರೀ ದಾಖಲಿಸಿದ ಅಸಲು ದಾವಾ ನಂಬರ್ 6285/2008 ರಲ್ಲಿ ನಾನು 1 ನೇ ಪ್ರತಿವಾದಿಯಾಗಿದೆ ಎಂದರೆ ಸರಿ. ಆ ದಾವೆಯ 1 ರಿಂದ 3 ನೇ ಐಟಂ

ಸ್ವತ್ತುಗಳು ಮತ್ತು ಈ ದಾವೆಯ 1 ರಿಂದ 3 ನೇ ಐಟಂ ಸ್ವತ್ತುಗಳು ಒಂದೇ ಎಂದರೆ ಸರಿ. ನಿಪಿ-21 ರಂತೆ ನಾನು ಸದರಿ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದೆ ಎಂದರೆ ಸರಿ. ನಿಪಿ-21 ರ ಪ್ಯಾರಾ 15 ರಲ್ಲಿ ಹೇಳಿರುವ ಸಂಗತಿಗಳು ಸರಿ ಮತ್ತು ಸತ್ಯವಾಗಿವೆ. ನಾನು ಆ ದಾವೆಯಲ್ಲಿ ಅರ್ಜಿ ನಂಬರ್ 2 ರಲ್ಲಿನ ಪ್ರತಿಯನ್ನು ಈ ದಾವೆಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿಗೆ ಅಸಲು ದಾವಾ ನಂಬರ್ 6285/2008 ರ ಪೂರ್ತಿ ಆದೇಶ ಪ್ರತಿಯ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಅದನ್ನು ಗುರುತಿಸಿದ್ದು, ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ಆದೇಶ ಪ್ರತಿಯಲ್ಲಿ ಅರ್ಜಿ 2 ರ ಮೇಲಿನ ಆದೇಶದಲ್ಲಿ ನ್ಯಾಯಾಲಯ ಐಟಂ 1 ರಿಂದ 3 ಪಿತ್ರಾರ್ಜಿತ ಸ್ವತ್ತುಗಳೆಂದು 1 ನೇ ಪ್ರತಿವಾದಿ ಒಪ್ಪಿರುತ್ತಾರೆ ಎಂದು ಉಲ್ಲೇಖಿಸಿದೆ ಎಂದರೆ ಸರಿ. ನಿಪಿ-21 ರ ಪ್ಯಾರಾ 36 ರಲ್ಲಿ ದಾವಾ ಐಟಂ ನಂಬರ್ 1 ರಿಂದ 3 ಪಿತ್ರಾರ್ಜಿತ ಸ್ವತ್ತುಗಳು ಎಂದು ಹೇಳಿ ಬರೆಸಿದ್ದೆ ಸಾಕ್ಷಿ ಮುಂದುವರೆದು ಸದರಿ ಸಂಗತಿಗಳು ಸತ್ಯವಾಗಿರುತ್ತವೆ ಆದರೆ ಈ ದಾವೆಗೆ ಪ್ರಸ್ತುತ ಅಲ್ಲ ಎಂದು ಹೇಳುತ್ತಾರೆ. ನಿಪಿ-14 ರ ಪ್ರಕರಣದಲ್ಲಿ ನಾನು 4 ನೇ ಎದುರುದಾರ ಎಂದರೆ ಸರಿ. ನಿಪಿ-14 ರಲ್ಲಿನ ದಾವಾ ಸ್ವತ್ತುಗಳು ಮತ್ತು ಈ ದಾವೆಯ ದಾವಾ ಸ್ವತ್ತುಗಳು ಒಂದೇ ಎಂದರೆ ಸರಿ. ನಿಪಿ-14 ರ ಪುಟ 23 ರಲ್ಲಿ ಮೇಲ್ಮನವಿದಾರರು ಸ್ವತ್ತುಗಳನ್ನು ತಮ್ಮಲ್ಲಿ ಉಳಿಸಿಕೊಂಡು 3 ನೇ ಎದುರುದಾರನಿಗೆ ಸದರಿ ಸ್ವತ್ತುಗಳ ಉಸ್ತುವಾರಿ ನೀಡಿದ್ದಾರೆಂದು ಉಲ್ಲೇಖವಿದೆ ಎಂದರೆ ಸರಿ. ನಾನು ಸದರಿ ಅರ್ಜಿಯಲ್ಲಿ ವಾಸ್ತವಿಕ ಸ್ವಾಧೀನತೆ ಆಧಾರದ ಮೇಲೆ ನನ್ನ ಪರ ಆದೇಶ ಪಡೆದಿದ್ದೆ.

ನಾನು ಅಸಲು ದಾವಾ ನಂಬರ್ 6285/2008 ರಲ್ಲಿ 12 ನೇ ಪ್ರತಿವಾದಿ ವಸಂತ ಪದ್ಮನಾಭನ್ ರವರ ವಿಶೇಷ ಅಧಿಕಾರ ಪತ್ರ ಧಾರಕನಾಗಿದ್ದೆ ಎಂದರೆ ಸರಿ. ನಾನು ಈ ದಾವೆಯ 1 ನೇ ಪ್ರತಿವಾದಿ ಜಯಶ್ರೀ ರವರ ತಂದೆ. ಜಯಶ್ರೀ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿ. ಅವಳ ಮದುವೆ ಮುಂಚೆ ಅವಳ ಹೆಸರು ಜಯಶ್ರೀ ಕೃಷ್ಣಸ್ವಾಮಿ ಎಂದು ಇತ್ತು ಎಂದರೆ ಸರಿ. ನಾನು ಅಸಲು ದಾವಾ ನಂಬರ್ 6285/2008 ರ ಪ್ಯಾರಾ 19 ಮತ್ತು 30 ರಲ್ಲಿ ಅವಳ ಹುಟ್ಟಿದ ದಿನಾಂಕಃ 14-08-1962 ಎಂದು ಹೇಳಿ ಬರೆಸಿದೆ ಎಂದರೆ ಸರಿ. ಎರಡು ಬಾರಿ ಜನ್ಮ ದಿನಾಂಕವನ್ನು ಆಗಸ್ಟ್ ತಿಂಗಳು ಎಂದು ಇಂಗ್ಲಿಷ್ ನಲ್ಲಿ ಹೇಳಿದ್ದೆ ಎಂದರೆ ಸರಿ. ಮದ್ರಾಸ್

ವಿಶ್ವವಿದ್ಯಾನಿಲಯದವರು ಜಯಶ್ರೀಗೆ ನೀಡಿರುವ ಅಂಕಪಟ್ಟಿಯಲ್ಲಿ ಅವಳ ಜನ್ಮ ದಿನಾಂಕಃ **14-01-1962** ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಅಂಕಪಟ್ಟಿ ತೋರಿಸಲಾಗಿ ಅದರಲ್ಲಿ ಜನ್ಮ ದಿನಾಂಕ ದಿಃ **14-01-1962** ಎಂದು ನಮುದಾಗಿರುವುದು ನಿಜ ಆದರೆ ಅದು ಮಿಸ್ಟೇಕ್ ಆಗಿ ಆಗಿದೆ ಎಂದು ಹೇಳುತ್ತಾರೆ. ಸದರಿ ಅಂಕಪಟ್ಟಿಯನ್ನು ನಿಡಿ-**4** ಎಂದು ಗುರುತಿಸಲಾಯಿತು. ಅಸಲು ದಾವಾ ನಂಬರ್ **6285/2008** ರಲ್ಲಿ ವಾದಿ ಜಯಶ್ರೀಗೆ ವಾದಪತ್ರ ದುರಸ್ತಿಗೆ ಅನುಮತಿಸಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ತಿದ್ದುಪಡಿ ವಾದಪತ್ರದ ನಕಲನ್ನು ತೋರಿಸಲಾಗಿ ಅದು ಆ ದಾವೆಯ ತಿದ್ದುಪಡಿ ವಾದಪತ್ರ ಎಂದು ಹೇಳಿದ್ದು ಅದನ್ನು ನಿಡಿ-**5** ಎಂದು ಗುರುತಿಸಲಾಯಿತು.

ನಾನು ಕಳೆದ ಬಾರಿ ನನ್ನ ವಿಚಾರಣೆಯಲ್ಲಿ **1** ನೇ ಪ್ರತಿವಾದಿ **2** ನೇ ಪ್ರತಿವಾದಿ ವಿರುದ್ಧ ಸಲ್ಲಿಸಿರುವ ಪ್ರಕರಣಗಳ ಸಂಬಂಧ ಸಾಕಷ್ಟು ದಾಖಲಾತಿ ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-**29** ರಲ್ಲಿ ದಿಃ **04-03-1955** ರ ವಿಭಾಗ ಪತ್ರ ಎಂದರೆ ಸರಿ. ದಿಃ **04-03-1995** ಎಂದು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿದ್ದೇನೆ. ಸದರಿ ದಾಖಲಾತಿ ಮೆಟ್ಟುಪಾಳ್ಯಂ, ತಮಿಳುನಾಡಿನಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ದಾವಾ ಸ್ವತ್ತುಗಳು ವಿಭಾಗದಲ್ಲಿ ಬಂದ ಸ್ವತ್ತುಗಳು ಎಂದು ಸಾಬೀತುಪಡಿಸುವ ಸಲುವಾಗಿ ನಾನು ಸದರಿ ದಾಖಲಾತಿ ಮೇಲೆ ಆಧಾರವಾಗಿದ್ದೆ. ಬೆಂಗಳೂರು ನಾ್ಯಯಾಲಯದಲ್ಲಿ ನನ್ನ ವಿರುದ್ಧ ಕ್ರಿಮಿನಲ್ ರಿವಿಷನ್ ಪಿಟಿಷನ್ **796/2015** ವಿಚಾರಣೆ ನಡೆಯುತ್ತಿದ್ದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ಸುಳ್ಳು ಪ್ರಕರಣ ಎಂದು ಹೇಳುತ್ತಾರೆ. **1** ನೇ ಪ್ರತಿವಾದಿ ನನಗೆ ನೀಡಿದ ಅಧಿಕಾರ ಪತ್ರವನ್ನು ಒಂದುವರೆ ವರ್ಷಗಳ ಹಿಂದೆ ಹಿಂಪಡೆದ ನಂತರ ಕೂಡ ನಾನು ಅವರ ಚೆಕ್ ಗೆ ಸಹಿ ಮಾಡಿ ದಿಃ **07-05-2017** ಎಂದು ನಮೂದಿಸಿದ್ದೆ ಎಂದರೆ ಸಾಕ್ಷಿ ಮುಂದುವರೆದು ಆ ಬಗ್ಗೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ನಾನು ನ್ಯಾಯಾಲಯಕ್ಕೆ ಮೋಸ ಮಾಡುವ ದುರುದ್ದೇಶದಿಂದ ಹಲವಾರು ನೊಂದಾಯಿತ ದಾಖಲಾತಿಗಳನ್ನು ಮುಚ್ಚಿಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಅಸಲು ದಾವಾ ನಂಬರ್ **6285/2008** ರಲ್ಲಿ **12** ನೇ ಪ್ರತಿವಾದಿಯ ಅಧಿಕಾರ ಪತ್ರ ಪಡೆದಿದ್ದೆ ಮತ್ತು ಪ್ರತಿವಾದ ಪತ್ರವನ್ನು ಅವರ ಪರವಾಗಿ ಅಳವಡಿಸಿಕೊಂಡಿದ್ದೆ ಎಂದರೆ ಸರಿ ಸದರಿ ದಾವೆಯಲ್ಲಿನ ತಿದ್ದುಪಡಿ ವಾದಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ತಿದ್ದುಪಡಿ ವಾದಪತ್ರದಲ್ಲಿ ವಾದಿ ಜಯಶ್ರೀ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ ಸ್ವತ್ತುಗಳ ಮೇಲಿನ ದಾವೆ ಹಿಂಪಡೆದಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಜಯಶ್ರೀ ನನ್ನ ವಿರುದ್ಧ ಟ್ರಸ್ಟ್ ಆಸ್ತಿ ದುರುಪಯೋಗ ಸಂಬಂಧ ಬೇರೆ ಪ್ರಕರಣ ದಾಖಲಿಸುತ್ತೇನೆ ಎಂದರೆ ಇರಬಹುದು. ನನ್ನ ಮಗಳು ಜಯಶ್ರೀ ಹಕ್ಕುದಾರಳಾಗಿ ಸ್ವಾಧೀನದಲ್ಲಿದ್ದರು ಅವಳ ಮೇಲಿನ ದ್ವೇಷದಿಂದ ಅವಳನ್ನು ಅತಿಕ್ರಮ ಪ್ರವೇಶದಾರಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಮೋಸ ಮಾಡಿ ನನ್ನ ಪರವಾಗಿ ಡಿಕ್ರಿ ಪಡೆಯುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಮಾರಾಟ ಮಾಡುವ ಯೋಚನೆ ಮಾಡಿಲ್ಲ. ಜಯಶ್ರೀ ವಾದಿ ವಿರುದ್ಧ ಸಲ್ಲಿಸಿರುವ ಹಲವಾರು ಪ್ರಕರಣದ ದಾಖಲಾತಿಗಳನ್ನು ನನ್ನ ವಕೀಲರಿಗೆ ನೀಡಲು ಯೋಚಿಸುತ್ತಿದ್ದೇನೆ ಮತ್ತು ನೀಡುತ್ತೇನೆ. **2** ನೇ ಪ್ರತಿವಾದಿ ವಿರುದ್ಧ ವಿದೇಶಗಳಲ್ಲಿ ಮತ್ತು ಭಾರತದಲ್ಲಿ ಪ್ರಕರಣಗಳು ಬಾಕಿ ಇರುವ ಬಗ್ಗೆ ನನ್ನ ವಾದಪತ್ರದಲ್ಲಿ ಹೇಳಿಲ್ಲ ನಾನು ನನ್ನ ವಕೀಲರಿಗೆ ನೀಡುತ್ತೇನೆ ಎಂದು ಹೇಳಿದ್ದ ಹಲವಾರು ದಾಖಲಾತಿಗಳನ್ನು ಇನ್ನು ನನ್ನ ವಕೀಲರಿಗೆ ನೀಡಿಲ್ಲ. ವಾದಪತ್ರವನ್ನು ನಾನು ನೀಡಿದ ಮಾಹಿತಿ ಪ್ರಕಾರ ನನ್ನ ವಕೀಲರು ತಯಾರಿಸಿದ್ದಾರೆ

***ಈ ಹಂತದಲ್ಲಿ ಮುಂದುವರೆದ*** *ಪಾಟೀ ಸವಾಲಿಗಾಗಿ* ***ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.***

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು.